OS 58/2016
PW 1

ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು. ದಿಃ **20.09.2021**

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಜಿ.ಎಸ್ ವಕೀಲರಿಂದ:

ನಿಪಿ **1** ದಿಃ **10.12.1980** ರ ಕ್ರಯ ಪತ್ರದ ದೃಡೀಕೃತ ನಕಲು, ಸಾಕ್ಷಿಯು ಸದರಿ ಅಸಲು ಕ್ರಯ ಪತ್ರವು ಮನೆ ಬದಲಾವಣೆ ಮಾಡುವಂತಹ ಸಂದರ್ಭದಲ್ಲಿ ಕಳೆದು ಹೋಗಿದ್ದು, ಸದರಿ ಮೂಲ ಪ್ರತಿಯು ಸಿಕ್ಕಿದರೆ ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆಂದು ನುಡಿಯುತ್ತಾರೆ. ನಿಪಿ **2** ದಾವಾ ಸ್ವತ್ತಿನ ಆರ್.ಟಿ.ಸಿ ಪ್ರತಿ, ನಿಪಿ **3** ಮ್ಯುಟೇಷನ್ ರಿಜಿಸ್ಟರ್ ಪ್ರತಿ, ನಿಪಿ **4** ಕೃಷಿ ಇಲಾಖೆಯವರು ನೀಡಿರುವ ಮಣ್ಣು ಮಾದರಿಯ ವಿವರದ ಪತ್ರ, ನಿಪಿ **5** ಖಾತೆ ಬದಲಾವಣೆ ಕುರಿತು ನೀಡಿರುವ ಅರ್ಜಿಗೆ ಕೊಟ್ಟಿರುವ ಸ್ವೀಕೃತಿ ಪತ್ರ, ನಿಪಿ **6** ಖಾತೆ ಬದಲಾವಣೆಗೆ ನೀಡಿರುವ ಅರ್ಜಿಯ ಪ್ರತಿ, ನಿಪಿ **7** ಪೋಲೀಸ್ ಠಾಣೆಯವರು ನೀಡಿರುವ ಸ್ವೀಕೃತಿ ಮತ್ತು ಹಿಂಬರಹ, ನಿಪಿ **8** ಮತ್ತು **9** ದಾವಾ ಆಸ್ತಿಯ ಎನ್ಕಂಬರೆನ್ಸ್ ಸರ್ಟಿಫಿಕೇಟ್‌ಗಳು, ನಿಪಿ **10** ಮತ್ತು **11** ದಾವಾ ಸ್ವತ್ತಿನ ರೆಕಾರ್ಡ್ ಆಫ್ ರೈಟ್ಸ್ ಮತ್ತು ಇಂಡೆಕ್ಸ್ ಆಫ್ ಲ್ಯಾಂಡ್ ನ ಪ್ರತಿಗಳು ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದ ರೀತ್ಯಾ ಕಂಪ್ಯೂಟರೀಕರಿ ಸಲಾಯ್ತು).

ಓದಿ, ಹೇಳಿ, ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.

**ಅಪರ** ಸಿವಿಲ್ ನ್ಯಾ. ಮತ್ತು ಜೆ ಎಂ ಎಫ್ ಸಿ, **ಸೊರಬ**